# ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ ಎಫ್ ಎ) ತನ್ನ

# ಕಲಾ ಅಭ್ಯಾಸ ಕಾರ್ಯಕ್ರಮದಡಿಯಲ್ಲಿ

# ಕಲಾ ನಿರ್ಮಿತಿಗಳಿಗೆ (ಪ್ರೊಡಕ್ಷನ್ಸ್)

# ಅರ್ಜಿಗಳನ್ನು ಆಹ್ವಾನಿಸುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ**: ಪ್ರಸ್ತಾವನೆಗಳನ್ನು ವರ್ಷದಾದ್ಯಂತ ಸ್ವೀಕರಿಸಲಾಗುವುದು**.

**ಕಲಾ ಅಭ್ಯಾಸ ಕಾರ್ಯಕ್ರಮ**ದ ಉದ್ದೇಶ, ಕಲಾವಿದರು ತಮ್ಮ ಪ್ರಸ್ತುತ ಅಭ್ಯಾಸವನ್ನು ಹೊಸ ದಿಕ್ಕಿನಲ್ಲಿ ವಿಸ್ತರಿಸಲು ಸಹಕಾರಿಯಾದ ಯೋಜನೆಗಳನ್ನು ಕೈಗೊಳ್ಳುವುದು. ಇವುಗಳು ಪ್ರಯೋಗಶೀಲವಾಗಿದ್ದು, ಈಗಾಗಲೇ ಒಪ್ಪಿತವಾದ ರೂಢಿಗಳನ್ನು ಪ್ರಶ್ನಿಸುವಂಥದ್ದಾಗಿರಬಹುದು, ತಮ್ಮ ಕಲಾ ಪ್ರಕಾರದಲ್ಲಿ ವಸ್ತು, ರೂಪ, ಮಾಧ್ಯಮಗಳ ಹೊಸ ಸಾಧ್ಯತೆಗಳನ್ನು ಹುಡುಕುವಂಥದ್ದಾಗಿರಬಹುದು, ರಂಗಸ್ಥಳ, ಶ್ರೋತೃಗಳು/ ವೀಕ್ಷಕರು, ಅಥವಾ ಸಮುದಾಯದ ಜೊತೆಗೆ ಹೊಸ ರೀತಿಯ ಪಾಲ್ಗೊಳ್ಳುವಿಕೆಯನ್ನು ಹುಡುಕುವಂಥದ್ದಾಗಿರಬಹುದು.

**ಕಲಾ ವೇದಿಕೆಗಳು**:
ಕೆಲವೊಮ್ಮೆ ಕಲಾವಿರಿಗೆ ತಮ್ಮ ಅಭಿಪ್ರಾಯಗಳ ವಿನಿಮಯಕ್ಕೆ, ಹೊಸ ರೀತಿಯ ಅಭಿವ್ಯಕ್ತಿ ಯನ್ನು ಕಂಡುಕೊಳ್ಳಲು, ಅಥವಾ ತಮ್ಮ ಕಲಾಭ್ಯಾಸವನ್ನು ಪೋಷಿಸುವಂತಹ ಸಂಪರ್ಕಜಾಲಗಳನ್ನು ಹುಟ್ಟುಹಾಕಲು ಒಂದೆಡೆ ಸೇರುವ ಅವಶ್ಯಕತೆ ಕಂಡುಬರಬಹುದು. ತಮ್ಮ ಪ್ರಸ್ತುತ ಕಲಾ ಮಾಧ್ಯಮದಾಚೆಗಿನ ಕಲ್ಪನೆಗಳ ಹುಡುಕಾಟ, ಒಂಟಿಯಾಗಿ ಬಹಳ ಕಾಲ ಕೆಲಸ ಮಾಡಿ, ಅದರಿಂದ ಬಿಡುಗಡೆ ಪಡೆಯುವ ಅವಶ್ಯಕತೆ, ಅಥವಾ ನಿರ್ದಿಷ್ಟ ಸಾಮಾಜಿಕ–ರಾಜಕೀಯ ಪರಿಸ್ಥಿತಿಗೆ ಕಳೆಯ ಮೂಲಕ ಪ್ರತಿಸ್ಪಂದನೆ ನೀಡಬೇಕಾದ ತುರ್ತು ಈ ಒಟ್ಟು ಸೇರುವ ಹಂಬಲವನ್ನು ಹುಟ್ಟುಹಾಕಿರಬಹುದು.

ಕಲಾ ಅಭ್ಯಾಸ ಕಾರ್ಯಕ್ರಮದಡಿಯಲ್ಲಿ, ನಿರ್ದಿಷ್ಟ ಕಲಾಪ್ರಕಾರಗಳ ಒಳಗೆ ಅಥವಾ ಎರಡು/ ಹೆಚ್ಚಿನ ಪ್ರಕಾರಗಳ ನಡುವೆ ಕಲಾವಿದರನ್ನು ಒಂದುಗೂಡಿಸುವ, ಸೃಜನಶೀಲತೆಯನ್ನು ಪೋಷಿಸುವ, ಹಾಗೂ ತಮ್ಮ ಕಲಾಭ್ಯಾಸವನ್ನು ಮುಂದುವರೆಸಲು ಸಹಾಯಮಾಡುವ ಉದ್ದೇಶದಿಂದ ಕೂಡಿದ ಸಂಪರ್ಕ ಜಾಲಗಳು ಹಾಗೂ **ಕಲಾ ವೇದಿಕೆ**ಗಳ ನಿರ್ಮಾಣ (ಭೌತಿಕ ಅಥವಾ ಬೇರೆ ರೀತಿಯ ವೇದಿಕೆಗಳಾಗಿರಬಹುದು)ಕ್ಕಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತೇವೆ.

ಯೋಜನೆಯ ಅವಧಿ**:** ಗರಿಷ್ಠ 6 ತಿಂಗಳುಗಳು

ಅನುದಾನ ಮಿತಿ**:** ಗರಿಷ್ಠ ರೂ **3,00,000/-** (ಒಟ್ಟು ಖರ್ಚಿನ ೩೦% ಒಳಗೆ ನಿಮ್ಮ ಗೌರವಧನಕ್ಕಾಗಿ ಬೇಡಿಕೆ ಸಲ್ಲಿಸಬಹುದು)

**ಸಮಯಸೂಚಿ:** ಪ್ರಸ್ತಾವನೆಗಳನ್ನು ವರ್ಷದಾದ್ಯಂತ ಸ್ವೀಕರಿಸಲಾಗುವುದು.

**ಪ್ರಸ್ತಾವನೆಗಳನ್ನು ಯಾರು ಕಳುಹಿಸಬಹುದು?**

ಈ ಕಾರ್ಯಕ್ರಮದಡಿಯಲ್ಲಿ ನಿರ್ದಿಷ್ಟ ಕಲಾಪ್ರಕಾರವೊಂದರಲ್ಲಿ ಅಥವಾ ಅಂತರ್ಶಿಸ್ತೀಯವಾಗಿ ಕೆಲಸ ಮಾಡುತ್ತಿರುವ ಕಲಾವಿದರು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

- ಸಂಗೀತ, ಶಬ್ದ, ಪಠ್ಯ, ನೃತ್ಯ, ಚಲನೆ, ನಾಟಕ, ಗೊಂಬೆಯಾಟ, ಕಥೆ ಹೇಳುವುದು, ಇಂದ್ರಜಾಲ, ಸರ್ಕಸ್ ಹಾಗೂ ಇನ್ನಿತರ ಪ್ರದರ್ಶನ ಕಲೆಗಳಲ್ಲಿ ತೊಡಗಿಕೊಂಡ ಕಲಾವಿದರಿರಬಹುದು.

- ಸಿನಿಮಾ (ಸಾಕ್ಷ್ಯಚಿತ್ರ ಹಾಗೂ ಕಲ್ಪನೆಯ ಆಧಾರಿತ), ಅನಿಮೇಶನ್, ಛಾಯಾಚಿತ್ರ, ಇನ್ಸ್ಟಲೇಶನ್, ಹೊಸ ಮೀಡಿಯಾ, ಕೃತಕ ಬುದ್ಧಿವಂತಿಕೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್), ರೊಬೊಟಿಕ್ಸ್ ಸಂವಹನಾತ್ಮಕ ಕಲೆಗಳು, ಗೇಮಿಂಗ್, ಚಿತ್ರಕಲೆ, ಶಿಲ್ಪಕಲೆ, ಪ್ರಿಂಟ್ ತಯಾರಿಕೆ, ಕಾಮಿಕ್ ಪುಸ್ತಕ, ಗ್ರಾಫಿಕ್ ಕಥನ ಇನ್ನಿತರ ಕಲೆಗಳಲ್ಲಿ ತೊಡಗಿಕೊಂಡಿರುವ ದೃಶ್ಯಕಲಾವಿದರಿರಬಹುದು.

- ಕಲಾ ನಿರ್ವಾಹಕರು (ಕ್ಯುರೇಟರ್ಸ್) – ಅದರಲ್ಲೂ ಗ್ಯಾಲರಿಗಳ ಹೊರತಾಗಿ ಕೆಲಸ ಮಾಡುತ್ತಿರುವವರು.

- ಕವಿಗಳು, ಕಾದಂಬರಿಕಾರರು, ನಾಟಕಕಾರರು

- ಅಂತರ್ಶಿಸ್ತೀಯ ಕೆಲಸದಲ್ಲಿ ತೊಡಗಿಕೊಂಡಿರುವವರು

**ಅರ್ಹತೆ:**

ನೀವು ಭಾರತೀಯ ನಾಗರಿಕರಾಗಿದ್ದಲ್ಲಿ ಯೋಜನಾ ಪ್ರಸ್ತಾವನೆಯನ್ನು ಕಳುಹಿಸಲು ನೀವು ಅರ್ಹರು. ಯೋಜನೆಯಡಿಯಲ್ಲಿ ನಿಮ್ಮ ಜೊತೆ ಸಹಯೋಗ ಕೈಗೊಳ್ಳುವ ಕಲಾವಿದರು ಕೂಡ ಭಾರತೀಯ ನಾಗರಿಕರಾಗಿರುವುದು ಅವಶ್ಯಕ. ವಿವರಗಳಿಗಾಗಿ ಈ ಲಿಂಕ್ ನೋಡಿ.

**ಯೋಜನಾ ಪ್ರಸ್ತಾವನೆಗಳನ್ನು ಹೇಗೆ ಕಳುಹಿಸಬೇಕು?**

- ನೀವು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಪ್ರಸ್ತಾವನೆಯನ್ನು ಕಳುಹಿಸಬಹುದು. ಐ ಎಫ್ ಎ ಇಂಗ್ಲಿಷ್ ಹೊರತಾಗಿ ಇತರ ಭಾರತೀಯ ಭಾಷೆಗಳ ಯೋಜನೆಗಳಿಗೆ ಪ್ರೋತ್ಸಾಹ ನೀಡುತ್ತದೆ.

- ನಿಮ್ಮ ಪ್ರಶ್ನೆಗಳು ಹಾಗೂ ಕರಡು ಯೋಜನೆಗಳನ್ನು ಐ ಎಫ್ ಎ ಸಿಬ್ಬಂದಿಯ ಪ್ರತಿಕ್ರಿಯೆಗಾಗಿ ಬರಹ, ಶ್ರಾವ್ಯ ಅಥವಾ ದೃಶ್ಯ(ವೀಡಿಯೊ) ರೂಪದಲ್ಲಿ ಕಳುಹಿಸಬಹುದು. ಅಂತಿಮ ಯೋಜನಾ ಪ್ರಸ್ತಾವನೆಗಳನ್ನು ಮಾತ್ರ ಬರಹ ರೂಪದಲ್ಲೇ ಸಲ್ಲಿಸಬೇಕು.

- ನಮಗೆ ಈ ಮಾಹಿತಿಗಳೊಡನೆ ಪ್ರಸ್ತಾವನೆಯನ್ನು ಕಳುಹಿಸಿ:
    - ನಿಮ್ಮ ಪ್ರಸ್ತುತ ಕಲಾ ಅಭ್ಯಾಸ, ಕಲಾವಿದರಾಗಿ ಕಾಳಜಿಗಳು ಹಾಗೂ ಆಸಕ್ತಿಗಳು
    - ನೀವು ಉದ್ದೇಶಿಸಿರುವ ಕಲಾ ವೇದಿಕೆಯ ನಿರ್ಮಾಣದ ವಿವರಗಳು, ಸಹಯೋಗಿಗಳ ವಿವರ, ವೇದಿಕೆಯನ್ನು ನಿರ್ಮಿಸಬಯಸುವ ಜಾಗ/ ಸಂಪರ್ಕಜಾಲದ ವಿವರಗಳು ಹಾಗೂ ಈ ವೇದಿಕೆಯನ್ನು ನೀವು ನಿರ್ಮಿಸಲು ಬಯಸಲು ಕಾರಣಗಳು
    - ವಿಸ್ತೃತ ಸಮಯಸೂಚಿ ಹಾಗೂ ಆಯವ್ಯಯ ಪತ್ರ
    - ಈ ಯೋಜನೆಗೆ ಪ್ರಸ್ತುತವಾಗುವ ನಿಮ್ಮ ಈ ಹಿಂದಿನ ಕೆಲಸದ ಉದಾಹರಣೆಗಳು

ಐ ಎಫ್ ಎ ಇಂಗ್ಲಿಶ್ ಹೊರತಾಗಿ ಇತರ ಭಾರತೀಯ ಭಾಷೆಗಳ ಯೋಜನೆಗಳಿಗೆ ಪ್ರೋತ್ಸಾಹ ನೀಡುತ್ತದೆ.

ನಿಮ್ಮ ಪ್ರಶ್ನೆಗಳು ಹಾಗೂ ಕರಡು ಯೋಜನೆಗಳನ್ನು ಐ ಎಫ್ ಎ ಸಿಬ್ಬಂದಿಯ ಪ್ರತಿಕ್ರಿಯೆಗಾಗಿ ಬರಹ, ಶ್ರಾವ್ಯ ಅಥವಾ ದೃಶ್ಯ(ವೀಡಿಯೊ) ರೂಪದಲ್ಲಿ ಕಳುಹಿಸಬಹುದು. ನಿಮ್ಮ ಅಂತಿಮ ಪ್ರಸ್ತಾವನೆಗಳನ್ನು ಮಿಂಚಂಚೆಯ ಮುಖಾಂತರ ಜಾನ್ ಜೇವಿಯರ್ಸ್, ಕಾರ್ಯಕ್ರಮ ಅಧಿಕಾರಿ, john@indiaifa.org - ಇವರಿಗೆ - 'Project Proposal for Arts Platforms (Arts Practice)' ಎಂಬ ಒಕ್ಕಣೆಯೊಂದಿಗೆ ಕಳುಹಿಸಿ. ನಿಮ್ಮ ಪ್ರಸ್ತಾವನೆಯನ್ನು ಕುರಿತಂತೆ ಯಾವುದೇ ಪ್ರಶ್ನೆ/ಸಂದೇಹಗಳಿದ್ದಲ್ಲಿ, ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಕೂಡ ಇದೇ ಮಿಂಚಂಚೆ ವಿಳಾಸಕ್ಕೆ ಬರೆಯಿರಿ.

ಆಯ್ಕೆಯಾದ ಎಲ್ಲ ಯೋಜನೆಗಳನ್ನೂ ಐ ಎಫ್ ಏ ಸ್ವತಃ ಕಾರ್ಯಗತಗೊಳಿಸುತ್ತದೆ.

**ಐ ಎಫ್ ಎ ಮಕ್ಕಳನ್ನೊಳಗೊಂಡಂತೆ ಎಲ್ಲರಿಗೂ ಬೆಂಬಲ, ಗೌರವ, ರಕ್ಷಣೆ ನೀಡುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ. ಎಲ್ಲ ಅರ್ಜಿದಾರರೂ ಇದಕ್ಕೆ ಬದ್ಧವಾಗಿದ್ದು, ಇದನ್ನು ಸದಾ ಎತ್ತಿಹಿಡಿಯಬೇಕು.**